ಒತ್ತಾಯ ಮಾಡುತ್ತಿದ್ದಾರೆ. ಆದ್ದರಿಂದ ಈ ವರ್ಷವಾದರೂ ಹಾಸನಕ್ಕೆ ಒಂದು ಸೀಡ್ ಪ್ರೋಸ್ಸಿಂಗ ಸೆಂಟರನ್ನು ಕೊಡುವುದನ್ನು ಪರ್ಯಾಲೋಚನೆ ಮಾಡುತ್ತೀರಾ?

ಶ್ರೀ ಕೆ. ಎಚ್. ಪಾಟೀಲ.— ಅದು ಅಲ್ಲಿ ಅವಶ್ಯ ಇದ್ದರೆ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಪರಿಶೀಲಿಸುತ್ತೇವೆ.

DISTRIBUTION OF CULTIVABLE LANDS IN DAVANAGERE TALUK

371 Smt. NAGAMMA C. KESHAVAMURTHY (Davanagere).– Will the Minister for Revenue be pleased to state:—

(a) the number of acres of cultivable land available for distribution in Davanagere Taluk ;

(b) the action taken to distribute such land to the landless people in this Taluk ;

(c) the procedure followed for distribution of such land ?

Sri N. HUTCHMASTHY GOWDA (Minister for Revenue).—

(a) 596 acres and 7 guntas as on 1st July 1973.

(b) All the applications have been placed before the Taluk Land Grant Consultative Committee. Orders will issue only after receipt of recommendations of the Committee by the Tahsildar.

(c) After receipt of application, due enquiries will be made and records built up as per Rules 4, 5 and 6 of Mysore Land Grant Rules, 1969 and the applications will be placed before the Taluk Land Grant Consultative Committee. The recommend tions of the Committee will be ordinarilly accepted by the competent sanctioning authority.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.—ದಾವಣಗೆರೆ ತಾಲೂಕಿನಲ್ಲಿ ಸಾಗುವಳಿಗೆ ಯೋಗ್ಯವಾದ ಜಮೀನು ಕೊಡುವ ಸಂಬಂಧದಲ್ಲಿ ಎಷ್ಟು ಅಪ್ಲಿಕೇಷನ್‌ಗಳು ಶಿಫಾರಸ್ಸಾಗಿ ಬಂದಿವೆ, ಎಷ್ಟು ಅಪ್ಲಿಕೇಷನ್‌ಗಳಿಗೆ ಆರ್ಡರ್ ಇಷ್ಯೂ ಮಾಡಿದ್ದೀರಿ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅಲ್ಲಿ ೧೦೫೦ ಎಕರೆ ೨೧ ಗುಂಟೆ ಜಮೀನು ಇದೆ. ಅಲ್ಲಿ ಒಂದು ವರ್ಷದಲ್ಲಿ ೪೭೬ ಎಕರೆ ೩೨ ಗುಂಟೆ ಜಮೀನನ್ನು ರೈತರಿಗೆ ಮಂಜೂರು ಮಾಡಿದೆ. ಅದರಲ್ಲಿ ಬಹುತೇಕ ಕಮೀಟಿಯವರ ಶಿಫಾರಸನ್ನು ಒಪ್ಪಿ ಕೊಂಡು ಅದರ ಮೇಲೆ ಸಾಗುವಳಿ ಚೀಟಿಯನ್ನು ಕೊಟ್ಟಿದ್ದಾರೆ.

ಶ್ರೀಮತಿ ನಾಗಮ್ಮ ಸಿ ಕೇಶವಮೂರ್ತಿ — ಈಗ ತಾವು ಜಮೀನು ಮಂಜೂರಾತಿಯ ಸಮಾಲೋಚನಾ ಸಮಿತಿಯ ಸಿಫಾರಸಿನ ಮೇಲೆ ಅಲ್ಲಿ ಜಮೀನು ಮಂಜೂರು ಮಾಡಿ ಸಾಗುವಳಿ ಚೀಟ್ ಕೊಟ್ಟಿದ್ದೀವೆ ಎಂದು ಹೇಳಿದಿರಿ; ಹಾಗಾದರೆ ಎಷ್ಟು ಜನಗಳಿಗೆ ಅಲ್ಲಿ ಜಮೀನನ್ನು ಮಂಜೂರು ಮಾಡಿದ್ದೀರಿ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಎಷ್ಟು ಜನಗಳಿಗೆ ಮಂಜೂರಾಗಿದೆ ಎನ್ನುವ ಅಂಕಿ ಅಂಶಗಳು ಈಗ ನನ್ನಲ್ಲಿ ಇಲ್ಲ. ಅಲ್ಲಿ ಎಷ್ಟು ಎಕರೆ ಜಮೀನು ಮಂಜೂರಾಗಿದೆ ಎನ್ನುವುದನ್ನು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ.— ಈಗ ಸಾಗುವಳಿಗೆ ಯೋಗ್ಯವಾದ ಜಮೀನನ್ನು ಸರ್ಕಾರದವರು ರೈತರಿಗೆ ಏನು ಮಂಜೂರು ಮಾಡುತ್ತಾರೆ ಅದಕ್ಕೆ ಆದಷ್ಟು ಕಡಿಮೆ ರೇಟನ್ನು ನಿಗದಿ ಮಾಡುವುದಕ್ಕೆ ಆದೇಶ ಕೊಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— ಸರ್ಕಾರದವರು ೪–೫ ವರ್ಷಗಳ ಹಿಂದೆ ಯಾವಯಾವ ತಾಲೂಕಿನಲ್ಲಿ ಖುಷ್ಕಿ ಜಮೀನಿನ ಬೆಲೆ ಎಷ್ಟು, ತರೀ ಜಮೀನಿನ ಬೆಲೆ ಎಷ್ಟು ಎಂಬುದನ್ನು ತರಿಸಿ ಅದರ ಆಧಾರದ ಮೇಲೆ ಆ ಜಮೀನಿನ ಬೆಲೆಯನ್ನು ನಿಗದಿ ಮಾಡಲಾಗುತ್ತಿದೆ. ಅದನ್ನು ಇನ್ನೂ ಬದಲಾವಣೆ ಮಾಡಿಲ್ಲ. ೪–೫ ವರ್ಷಗಳ ಹಿಂದೆ ಇದ್ದ ಪರಿಸ್ಥಿತಿಗೂ ಈಗಿನ ಪರಿಸ್ಥಿತಿಗೂ ವ್ಯತ್ಯಾಸ ಇದೆ. ಈಗ ಜಮೀನಿನ ಬೆಲೆ ಜಾಸ್ತಿಯಾಗಿದೆ ಎಂಬುದು ಮಾನ್ಯ ಸದಸ್ಯರಿಗೆ ಗೊತ್ತಿರುವುದರಿಂದ ಅದನ್ನು ಕಡಿಮೆ ಮಾಡತಕ್ಕ ಅಭಿಪ್ರಾಯ ಸರ್ಕಾರಕ್ಕೆ ಸದ್ಯಕ್ಕೆ ಇಲ್ಲ.

UNAUTHORISED CULTIVATION OF GOMAL LANDS IN DAVANAGERE TALUK

374. Smt. NAGAMMA C. KESHAVA MURTHY (Davanagare).– Will the Minister for Revenue be pleased to state:—

(a) the extent of gomal land under unauthorised cultivation in Davanagere Taluk ;

(b) the steps taken to evict persons form cultivating the above gomal lands ;

(c) the extent of land available in Davanagere taluk for the distribution to the landless agriculturists ?

Sri N. HUTCHAMASTHY GOWDA (Minister for Revenue).—

(a) 696 Acres 35 Guntas.

(b) T. T. proceedings have been taken.

(c) 596 Acres 7 Guntas as on 7th July 1973.